ಶ್ರೀ ಗಣೇಶ ಶಾರದ ಗುರುಭ್ಯೋ ನಮಃ

# ಚಾಮುಂಡಿ ಬೆಟ್ಟ



“ಶ್ರೀ ಚಾಮುಂಡೇಶ್ವರೀ ನಮೋ ನಮಃ”



“ಶ್ರೀ ಚಾಮುಂಡೇಶ್ವರೀ ನಮೋ ನಮಃ”

“ಶ್ರೀ ಚಾಮುಂಡೇಶ್ವರೀ ನಮೋ ನಮಃ”

“ಶ್ರೀ ಚಾಮುಂಡಾ ಮಾಹಾಮಾಯಾ ಶ್ರೀಮತ್ಸಿಂಹಾಸನೇಶ್ವರೀ
ಶ್ರೀವಿದ್ಯಾ ವೇದ್ಯಮಹಿಮಾ ಶ್ರೀಚಕ್ರಪುರವಾಸಿನೀ”

“ಚಾಮುಂಡಿ” ಎಂದರೆ ನಮ್ಮ ಮೈಸೂರು ನಗರವನ್ನು ಕಾಯೋ ಗ್ರಾಮದೇವತೆ, ಪರಂಪರಾನುಗತವಾಗಿ ಮೈಸೂರನ್ನು ಆಳುತ್ತಿರುವ ಮಹಾರಾಜರ ಆರಾಧ್ಯ ದೇವತೆ. ಹದಿನೆಂಟು ಮಹಾ ಮಹಿಮೆಯುಳ್ಳ ಶಕ್ತಿ ಪೀಠಗಳಲ್ಲಿ ಇದೂ ಒಂದು. ಸತೀದೇವಿಯ ಕೂದಲು ಇಲ್ಲಿ ಬಿತ್ತೆಂದು ಪ್ರತೀತಿ.

“ಯಾ ದೇವೀ ಸರ್ವ ಭೂತೇಷು ಶಕ್ತಿರೂಪೇಣ ಸಂಸ್ಥಿತಾ,
ನಮಸ್ತಸ್ಯೈ, ನಮಸ್ತಸ್ಯೈ, ನಮಸ್ತಸ್ಯೈ ನಮೋ ನಮಃ”

ದೇವಿಯ ದರ್ಶನ ಮಾಡಲು ಹೊರಟು, ಮಹಾಬಲಾಚಲ ಅಂತ ಕರೆಯೋ ಈ ಬೆಟ್ಟದ ಕೆಳಗೆ ಬಂದರೆ, ದೇವರ ದರ್ಶನದ Details ಇರುವ ಒಂದು ದೊಡ್ಡ Board ಕಾಣುತ್ತದೆ. ಚಾಮುಂಡಿ ಬೆಟ್ಟವನ್ನು ಹತ್ತುತ್ತಾ, ಹಚ್ಚ ಹಸುರಾಗಿ ಕಂಗೊಳಿಸುತ್ತಿರುವ ಪ್ರಕೃತಿಯಲ್ಲಿ ದೇವಿಯ ದರ್ಶನ ಮಾಡುತ್ತಾ, ದಾರಿಯಲ್ಲಿ ಕಾಣುವ ದೇವಿಯ ಮಹಿಮಾನ್ವಿತ ಸ್ತೋತ್ರಗಳನ್ನು ಓದಿ ಧನ್ಯರಾಗುತ್ತಾ, ಬೆಟ್ಟದ ಮೇಲೆ ತಲುಪಿದ ತಕ್ಷಣ, ದೊಡ್ಡದಾಗಿ ಕಾಣುವ ಮಹಿಷಾಸುರನನ್ನು ನೋಡಿ, ಇವನನ್ನೇ ಅಲ್ಲವೇ, ಈ ತಾಯಿ ಸಂಹಾರ ಮಾಡಿ, ಮಹಿಷಾಸುರ ಮರ್ಧಿನಿ ಅಂತ ಪ್ರಸಿದ್ಧಳಾದಳು ಅಂದುಕೊಂಡು,

"ಜಯ ಜಯ ಹೇ ಮಹಿಷಾಸುರ ಮರ್ಧಿನಿ, ರಮ್ಯಕಪರ್ಧಿನಿ ಶೈಲಸುತೇ"

ಅಂತ ಅವಳನ್ನ ಸ್ತುತಿಸಿ, ಸ್ವಲ್ಪ ಮುಂದೆ ಹೋದರೆ, ಭವ್ಯವಾದ ದೇವಸ್ಥಾನದ ಗೋಪುರ, ಅದರ ಮೇಲಿರುವ ಕಲಶಗಳು ಎಲ್ಲಕ್ಕೂ ನಮಸ್ಕಾರ ಮಾಡಿ, ಮುಂದೆ ಹೋಗ್ತಾ ಇದ್ದರೆ, ರಸ್ತೆಯ ಎರಡೂ ಕಡೆ ಇಟ್ಟಿರುವ ತಾವರೆ ಹೂಗಳು, ಸಂಪಿಗೆ ಹೂಗಳು, ಪೂಜಾ ಸಾಮಗ್ರಿಗಳು, ಎಲ್ಲವನ್ನೂ ನೋಡುತ್ತಾ, ಇನ್ನೂ ಮುಂದಕ್ಕೆ ಹೋಗಿ, ದೇವಸ್ಥಾನದ ಮುಖ್ಯದ್ವಾರದ ಮುಂದೆ ನಿಂತು, ಅಲ್ಲಿ ಬಾಗಿಲ ಮೇಲಿರುವ ಗಣಪತಿಗೆ ನಮಸ್ಕಾರ ಮಾಡಿ, ಕಾಲು ತೊಳೆದುಕೊಂಡು, ಬಲಪಕ್ಕದಲ್ಲಿರುವ ಗಣಪತಿಗೆ ನಮಸ್ಕಾರ ಮಾಡಿ, ಪುಟ್ಟ ಪುಟ್ಟ ಮೆಟ್ಟಿಲುಗಳನ್ನು ಹತ್ತಿ, ಕೋತಿಗಳಿಂದ ತಪ್ಪಿಸಿಕೊಂಡು ಮುಂದಕ್ಕೆ ಹೋಗಿ, ಧ್ವಜಸ್ತಂಭದ ಮುಂದೆ ಅರಿಶಿನ ಕುಂಕುಮಗಳಿಂದ ಪೂಜಿಸಿರುವ ದೇವಿಯ ಪಾದಗಳನ್ನು ಭಕ್ತಿಯಿಂದ ಕಣ್ಣಿಗೊತ್ತಿಕೊಂಡು, ಧ್ವಜಸ್ತಂಭದ ನಾಲ್ಕು ಕಡೆಯಲ್ಲೂ ಇರುವ ಗಣಪತಿ, ಅಮ್ಮನವರಿಗೆ ನಮಸ್ಕಾರ ಮಾಡಿ, ಬಾಗಿಲ ಮೇಲೆ ಹಾಕಿರುವ ಅಮ್ಮನವರ ಚಿತ್ರಪಟಕ್ಕೆ ವಂದಿಸಿ, ಮುಂದಕ್ಕೆ ಬಾಗಿಲ ಹತ್ತಿರ ಹೋದಂತೆ, ಮುದ್ದಾದ, ಭವ್ಯವಾದ ಅಮ್ಮನವರಿಗೆ ನಮಸ್ಕಾರ ಮಾಡುತ್ತಾ, ಸಣ್ಣ ಸಣ್ಣ ಹೆಜ್ಜೆ ಇಟ್ಟು ಮುಂದಕ್ಕೆ ಹೋಗುತ್ತಾ, ದೇವಿಯ ಅಕ್ಕ ಪಕ್ಕ ಇರುವ ದೀಪಗಳು, ಆ ದೀಪದ ಕಾಂತಿಯಲ್ಲಿ ಪ್ರಜ್ವಲಿಸುತ್ತಿರುವ ಅಮ್ಮನವರ ವಿಶಾಲವಾದ ಕರುಣಾರಸಪೂರಿತವಾದ ಕಣ್ಣುಗಳು, ಆ ಕಣ್ಣುಗಳ ಕೆಳಗೆ ಫಳ ಫಳ ಅಂತ ಹೊಳೆಯುತ್ತಿರುವ ಮೂಗುತಿ, ನಮ್ಮನ್ನು ಆಶೀರ್ವದಿಸುತ್ತಿರುವ ತುಟಿಗಳು, ರಾಜಮನೆತನದವರು ಕೊಟ್ಟಿರುವ ಭವ್ಯವಾದ ಆಭರಣಗಳು, ಅವಳ ವಿಶಿಷ್ಟವಾದ ಕುಳಿತಿರುವ ಭಂಗಿ, ಅವಳುಟ್ಟಿರುವ ಪೀತಾಂಬರ, ರಮ್ಯವಾದ ಬಣ್ಣ ಬಣ್ಣದ

ಹೂವಿನ ಹಾರಗಳು, ಇವೆಲ್ಲವನ್ನೂ ಮನದಣಿಯ ನೋಡಿ, ಮಂಗಳಾರತಿ ಕಣ್ಣಿಗೆ ಒತ್ತಿಕೊಂಡು, ಎಡಗಡೆ ಇರುವ ಬಾಗಿಲಿನಿಂದ ಹೊರಗೆ ಬಂದು, ಒಂದೆರಡು ನಿಮಿಷ ಕೂತು, ದೇವರನ್ನು ಮತ್ತೊಮ್ಮೆ ಕಣ್ಮುಂದೆ ತರುವ ಪ್ರಯತ್ನ ಮಾಡಿ, ಗೋಪುರದ ದರ್ಶನ ಮಾಡಿ, ಅಲ್ಲಿ ಪೂಜ ಆಗುತ್ತಿರುವ ಅಮ್ಮನವರ ಉತ್ಸವ ಮೂರ್ತಿಯನ್ನು ನಿಧಾನವಾಗಿ ನೋಡಿ, ತೀರ್ಥ ತೆಗೆದುಕೊಂಡು, ಕುಂಕುಮ ಪ್ರಸಾದ ಇಸ್ಕೊಂಡು, ಚಂಡಿ ಹೋಮ ಮಾಡಿ ಮುಗಿದಿದ್ದ ಹೋಮಕುಂಡಕ್ಕೆ ನಮಸ್ಕಾರ ಮಾಡಿ, ಲಾಡು ಪ್ರಸಾದ ತೊಗೊಂಡು, ಅಲ್ಲಿರುವ ಸಂಪಿಗೆ ಮರದ ರೆಂಬೆಗಳ ನಡುವೆ ಮತ್ತೊಮ್ಮೆ ಗೋಪುರ ದರ್ಶನ ಮಾಡಿ, ಮುಂದಕ್ಕೆ ಬಂದು, ಅಲ್ಲಿರುವ ಆಂಜನೇಯ ಸ್ವಾಮಿಗೆ ನಮಸ್ಕರಿಸಿ, ತೀರ್ಥ ಪ್ರಸಾದ ತೊಗೊಂಡು,

"ಯತ್ರ ಯತ್ರ ರಘುನಾಥ ಕೀರ್ತನಂ ತತ್ರ ತತ್ರ ಕೃತಮಸ್ತಕಾಂಜಲಿಂ

ಬಾಷ್ಪವಾರಿ ಪರಿಪೂರ್ಣ ಲೋಚನಮ್ ಮಾರುತೀಂ ನಮತಃ ರಾಕ್ಷಸಾಂತಕಮ್"

ಅಂತ ಪ್ರಾರ್ಥಿಸಿ, ಎಡಗಡೆ ತಿರುಗಿ, ಮೆಟ್ಟಿಲುಗಳನ್ನು ಇಳಿದು, ಅಲ್ಲಿ ಎಡಗಡೆ ಇರುವ ಗಣಪತಿಗೆ ನಮಸ್ಕಾರ ಮಾಡಿ, ಹೊರಗಡೆ ಬಂದು, ಇನ್ನೊಮ್ಮೆ ಗೋಪುರದ ದರ್ಶನ ಮಾಡಿ, ಸ್ವಲ್ಪ ಮುಂದೆ ನಡೆದು, ಅಲ್ಲಿರುವ ಮಹಾಬಲೇಶ್ವರನ ದೇವಸ್ಥಾನದ ಗೋಪುರಕ್ಕೆ ನಮಸ್ಕಾರ ಮಾಡಿ, ಧ್ವಜಸ್ತಂಭದ ಮುಂದೆ ಇರುವ ನಂದಿ, ಎಲ್ಲವನ್ನೂ ದಾಟಿ,

ಮೃತ್ಯುಂಜಯಾಯ ರುದ್ರಾಯ ನೀಲಕಂಠಾಯ ಶಂಭುವೇ

ಅಮೃತೇಶಾಯ ಶರ್ವಾಯ ಮಹಾದೇವಾಯ ತೇ ನಮಃ

ಅಂತ ಅಲ್ಲಿರುವ ಶುಭಪ್ರದವಾದ ಶಿವನ ಮುಖ ಕೆತ್ತಿರುವ ಲಿಂಗರೂಪದಲ್ಲಿರುವ ಶಿವನಿಗೆ ನಮಸ್ಕರಿಸಿ, ವಿಭೂತಿ ಹಚ್ಚಿಕೊಂಡು, ಮಂಗಳಾರತಿ ತೊಗೊಂಡು, ಪಾರ್ವತೀ ದೇವಿಗೆ ನಮಸ್ಕಾರ ಮಾಡಿ, ಅಲ್ಲಿರುವ ಸಪ್ತ ಮಾತೃಕೆಯರು, ಗಣೇಶ, ಅಪರೂಪವಾದ ಶಿಲೆಯಲ್ಲಿ ಕೆತ್ತಿರುವ ನಟರಾಜ, ಮತ್ತೊಂದು ನಟರಾಜ, ಶಿವಕಾಮಿಯೊಂದಿಗೆ ಇರುವ ದಕ್ಷಿಣಾಮೂರ್ತಿಯನ್ನು ನೋಡಿ, ಚಂಡಿಕೇಶ್ವರನಿಗೆ ವರದಿ ಒಪ್ಪಿಸಿ, ದುರ್ಗಾದೇವಿಯನ್ನು ದರ್ಶಿಸಿ,

"ಯಾ ದೇವೀ ಸರ್ವ ಭೂತೇಷು ಕಾಂತಿರೂಪೇಣ ಸಂಸ್ಥಿತಾ,

ನಮಸ್ತಸ್ಯೈ, ನಮಸ್ತಸ್ಯೈ, ನಮಸ್ತಸ್ಯೈ ನಮೋ ನಮಃ"

ಅಂತ ಪ್ರಾರ್ಥಿಸಿ, ನಾಲ್ಕು, ಐದು ಪ್ರಾಕಾರಗಳಲ್ಲಿರುವ ಶಿವಲಿಂಗಗಳಿಗೆ ನಮಸ್ಕಾರ ಮಾಡಿ, ಮುಂದೆ ನಾರಾಯಣನ ದೇವಸ್ಥಾನಕ್ಕೆ ಬಂದು, ನಾವು ತಂದ ತುಳಸಿ, ಹೂವು ಕೊಟ್ಟು,

"ವನಮಾಲೀ ಗದೀ ಶಾಂರ್ಙ್ಗೀ ಶಂಖೀ ಚಕ್ರೀ ಚ ನಂದಕೀ

ಶ್ರೀಮಾನ್ ನಾರಾಯಣೋ ವಿಷ್ಣು ವಾಸುದೇವೋ ಭಿರಕ್ಷತು"

ಅಂತ ಪ್ರಾರ್ಥಿಸಿ, ಅಮ್ಮನವರಿಗೆ ತೃಪ್ತಿಯಾಗಬೇಕಾದರೆ ಅವಳ ಸೋದರನನ್ನು ಸೇವಿಸಲೇ ಬೇಕಲ್ಲವೇ ಅಂತ ನಮಸ್ಕಾರ ಮಾಡಿ, ಮಂಗಳಾರತಿ, ತೀರ್ಥ, ಪ್ರಸಾದ ತೊಗೊಂಡು, ಮುಂದಕ್ಕೆ ನಡೆಯುತ್ತಾ, ಮತ್ತೊಮ್ಮೆ ಗೋಪುರ ದರ್ಶನ ಮಾಡಿ, ದೇವಸ್ಥಾನದ ಸುತ್ತಾ ನಮಸ್ಕರಿಸುತ್ತಾ ನಡೆದು ಬಂದ್ರೆ, ಶ್ರೀ ಚಾಮುಂಡೇಶ್ವರಿಯ ದರ್ಶನ ಆಯಿತಲ್ವಾ?

## ಜಗದಂಬಾರ್ಪಣಮಸ್ತು

